doc-614
T·P-2

Reg No B G 155 28 12 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸುವರ್ಣ ಮಹೋತ್ಸವ
ಸಂಪೂರೈಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಭ್ರಷ್ಟಾಂಸ್ಥರಿತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಗರೀಬಿ ಹಟಾವೋ ಕಾಲ ನಿಗದಿ ಇಲ್ಲ

ಭುಟ್ಟೋರಿ ಅಸಂಬದ್ಧ ನಡೆನುಡಿ

ರಾವಲ್ಪಿಂಡಿ— ಭುಟ್ಟೋರು ಪಾಕಿಸ್ತಾನದ ಅಧ್ಯಕ್ಷತೆಯನ್ನು ವಹಿಸಿದ ವರ್ಷದಲ್ಲಿ ತನ್ನ ಕಚೇರಿಯಲ್ಲಿ ಕಳೆದದ್ದು ಕೆಲವನ್ನು ರಷ್ಯಾ ತಯಾರಿಕೆಯ ಎಂ ಐ–8 ಚಿಕ್ಕ ವಿಮಾನವಲ್ಲಿ ಸುತ್ತಾಡುವುದರಲ್ಲೇ ಕಳೆದಿದ್ದಾರೆ. ಭಾರತದೊಡನೆ ಶಾಂತಿಗಾಗಿ ಒಂದು ಕೈ ಚಾಚಿದರೆ, ಸೇಡು ತೀರಿಸಿಕೊಳ್ಳುವೆದಾಗಿ ಪ್ರತಿಜ್ಞೆಯನ್ನು ಮತ್ತೊಂದು ಕ್ಷಣಲಿ ಕಾಣಿಸುತ್ತಾರೆ – ಭಾರತದೊಡನೆ 1000 ಯುದ್ಧದ ಪ್ರಮಾಣ ಮಾಡಿದ ಈತನು ಘರ್ಷಣೆ ಮುಕ್ತಾಯಕ್ಕೆ ಪ್ರಥನು ಜಿಜ್ಞೆ ಇಟ್ಟಿದ್ದಾರೆ – ವಾಯವ್ಯ ಗಡಿಯ ಬುಡ್ಡಕಟ್ಟು ಜನರಿಗೆ ಬಂಗ್ಲಾ ದೇಶಕ್ಕೆ ಮನ್ನಣೆ ಅಗತ್ಯವೆಂದು ಹೇಳಿದವರು, ಜೇರೆ ಕಡೆ ಸಾಂಪ್ರದಾಯಕ ಮನ್ನಣೆಗೆ ಇನ್ನೂ ಅದಕ್ಕೆ ಸರಿಯಾದ ಕಾಲ ಬಂದಿಲ್ಲವೆನ್ನುತ್ತಾರೆ – ತಾವಿಲ್ಲದಿದ್ದರೆ ಪಾಕಿಸ್ತಾನದಲ್ಲಿ ಅಂದೋಳನವಾಗುವುದೆಂದೇ, ಅಮೇರಿಕಾದಿಂದ ಆರ್ಥಿಕ ಮತ್ತು ಆಯುಧಗಳ ನೆರವನ್ನು ಕೇಳುತ್ತಾರೆ – ವಿಶ್ವಸಂಸ್ಥೆಯಲ್ಲಿ ಬಂಗ್ಲಾದೇಶಕ್ಕೆ ಮನ್ನಣೆ ದೊರೆಯದಿರಲು ಚೀಣಾದಿಂದ ವೀಟೋ ಮಾಡಿಸಿದರೂ, ಪಾಕಿಸ್ತಾನಕ್ಕೆ ಚೀಣಾವ ಆರ್ಥಿಕ ನೆರವಿನ ನಂಬಿಕೆ ಹೊಂದಿಲ್ಲ

★

ಸಂತತಿ

ಪ್ರತಿಬಂಧಕ ಮಾತ್ರೆ ಪ್ರಭಾವ

★

ಲಂಡನ್— ಸಂತತಿ ನಿಯಂತ್ರಣ ಮಾತ್ರೆ ಸೇವಿಸುತ್ತಿರುವ ಸ್ತ್ರೀಯರಲ್ಲಿ ಶೇಕಡ 50 ರಷ್ಟು ಮಂದಿಯಲ್ಲಿ ಸಂಭೋಗಕ್ಕೆ ಆಸಕ್ತಿಯು ಕಡಿಮೆಯಾಗುತ್ತಿರುವುದೆಂದು ಬ್ರಿಟಿಷ್ ಮೆಡಿಕಲ್ ಜರ್ನಲ್ ಪ್ರಕಟಿಸಿದೆ

ಗಾಂಧೀಜಿಗೆ ನಮನ

★

ನೀನು ಎಂದು ಬಂದಿಳಿದೆ ಪುಣ್ಯಾತ್ಮ ಇಳೆಗೆ
ಅಂದಾಯ್ತು ಭಾರತಾಂಬೆಯ ಶುಭ ಗಳಿಗೆ
ಭಾರತಾಂಬೆಯ ಮಡಿಲೇ ನಿನಗದುವೆ ಸ್ವರ್ಗ
ತಂದುಕೊಟ್ಟಿತು ಸ್ವಾತಂತ್ರ್ಯ ನಿನ್ನ ಸಂಸರ್ಗ ॥ 1 ॥

ಬಾಲ್ಯದಲಿ, ಶಿಕ್ಷಣದಲಿ ರೀತಿ ನಡೆ ನುಡಿಯಲ್ಲಿ
ನಿನ್ನ ಶಾಂತಿ ಮಾರ್ಗದೆದುರು ಅಂಗ್ಲರದು ಎಲ್ಲಿ ?
ಭಾವೈಕ್ಯ ಭಾರತದಿ ದೃಢವನು ನೀನು
ಸವಿ ಬಿರುತಿದೆ ಇಂದು ಸ್ವಾತಂತ್ರ್ಯ ಜೇನು ॥ 2 ॥

ವಂದೇ ಮಾತರಂ, ಯಾವ ದ್ವೇಷವೂ ನಿನಗೆ ಬೇರಲ್ಲ
ರಾವನೇ ನಿನ್ನುಸಿರು, ಸತ್ಯವೇ ಬೆಲ್ಲ
ನಿನ್ನ ಆಶಯಕೆ, ನಿನ್ನ ಶಾಂತಿಗೆ ನಮ್ಮ ದಿದೋ ನಮನ
ಶಾಂತಿ ಮಾರ್ಗದಿ ನಡೆದ ನೀನೊಂದು ಚಿನುನ ॥ 3 ॥

(ಸೃ ಸಂ) – ರಿಡಾರ್ಡ್ ರೊಡ್ರಿಗ್ಸ್

★

ಹುಂಡಿಯಲ್ಲಿ ಕೈಕೋಳ

ಕೊಟ್ಟಿಯಂ— ಸಬರಮಲೈ ದೇವಾಲಯದ ಹುಂಡಿಯಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಎರಡು ಕೈಕೋಳಗಳು, ಒಂದು ಭಂಗಾರದ್ದು ಮತ್ತೊಂದು ಕಬ್ಬಿಣದ್ದು, ಮತ್ತು ಒಂದು ಚಿನ್ನದ ಕಠಾರಿ ಇದ್ದದ್ದು ಅಧಿಕಾರಿಗಳಿಗೆ ಆಶ್ಚರ್ಯ ಉಂಟುಮಾಡಿದೆ

ಪುಂಸತ್ವ ಹೀರುವ ನೀರು

ಜೈಸಲ್ಮರ್— ಇಲ್ಲಿಗೆ 40 ಮೈಲಿಗಳು ದೂರದಲ್ಲಿರುವ ಸಾನು ಗ್ರಾಮದಲ್ಲಿರುವ 500 ಪುರುಷರು, ಸ್ತ್ರೀಯರು, ಮಕ್ಕಳ ಉಪಯೋಗಕ್ಕೆ ಒಂದೇ ಭಾವಿಯಿದ್ದು, ಅದರ ನೀರು ಕುಡಿಯುವ ಪುರುಷರ ಪುಂಸತ್ವ ಹರಣವಾಗುತ್ತಿರುವುದರಿಂದ, ಅಲ್ಲಿಯ ಮಹಿಳೆಯರ ನಿಯೋಗವು ಕಲೆಕ್ಟರರನ್ನು ಕಂಡು, ತಮ್ಮ ಜೀವಿತದಲ್ಲಿ ಘರ್ಷಣೆ ಸೃಷ್ಟಿಸಿದನೀರನ್ನು ಒದಗಿಸಲು ಕೇಳಿಕೆ ಹಾಕಿದರು – ಆ ಭಾಗದಲ್ಲಿ ಬೇರೆ ಭಾವಿಗಳಿಲ್ಲದ್ದರಿಂದ ಪೇಚಾಟಕ್ಕೆ ಸಿಕ್ಕಿದ ಕಲೆಕ್ಟರರು ಮೇಲಧಿಕಾರಿಗಳಿಗೆ, ನಮ್ಮ ಪ್ರಾಣ ಉಳಿಸಿ ಓಲೆ ಕಳುಹಿಸುವುದಾಗಿ ತಿಳಿಸಿದರು ಲ್ಯಾಬೋರೇಟರಿಯಲ್ಲಿ ನೀರನ್ನು ಪರೀಕ್ಷಿಸುವುದಕ್ಕಾಗಿ ನೀರಿನ ಮಾದರಿಯನ್ನು ತೆಗೆದುಕೊಂಡುಹೋಗಲು ಬಂದ ನಿಪುಣನು, ಕುಡಿಯುವದಕ್ಕೂ ಸ್ನಾನಮಾಡುವದಕ್ಕೂ ನೀರಿಗಾಗಿ ದೂರದ ಹಳ್ಳಿಗಾಗಿ ನಡೆದುಕೊಂಡು ಹೋಬೇಕಾಯಿತು.

ಜೀವಿನಗಿಡಿದಿಂದ ಸಿಹಿ ಹಾಲು

ಕರಡಗಿ— ಇಲ್ಲಿಯ ಒಂದು ಜೀವಿನ ಮರದಿಂದ ಸಿಹಿ ಹಾಲು ಸುರಿಯುತ್ತಿದೆ – ಇದು ಗುಂಪುಗುಂಪುಗಳ ಜನರನ್ನು ಆಕರ್ಷಿಸುತ್ತಿದೆ!

ಪುರಸಭೆ

ಮೈಸೂರು— ಪುರಸಭಾಧಿವೇಶನವು ತಾ॥ 30 ಶನಿವಾರ 4 ಗಂಟೆಗೆ ನಡೆಯುವುದು

★

ಗರೀಬಿ ಹಟಾವೋ

ಬಿಧಯನಗರ— 'ಗರೀಬಿ ಹಟಾವೋ' ಬಗ್ಗೆ ಕಾಲ ನಿಗದಿಸಲು ಸಾಧ್ಯವಿಲ್ಲವೆಂದು ಪ್ರಧಾನಿ ಇಂದಿರಾರವರು ಹೇಳಿದರು'

●

ಅಧ್ಯಕ್ಷರಿಗೆ ಸುಸ್ವಾಗತ

ಬೆಂಗಳೂರು— ಇಲ್ಲಿಗೆ 6 ದಿನಗಳ ಭೇಟಿಗಾಗಿ ಬುಧವಾರ ಆಗಮಿಸಿದ ಭಾರತಾಧ್ಯಕ್ಷರು ಶ್ರೀ ಗಿರಿಯವರನ್ನು ಗೌರ್ನರ್ ಶ್ರೀ ಸುಖಾಡಿಯಾರವರೂ, ಪ್ರವಾಸೋದ್ಯಮ ಮಂತ್ರಿ ಶ್ರೀ ಅಜೀಜ್ ಸೇಟ್ ರವರೂ, ಮೇಯರ್ ಶ್ರೀ ತಿವಾರಿಯವರೂ ಹಾರ್ದಿಕ ಸ್ವಾಗತ ನೀಡಿದರು.

★

ನಿವೇಶನಗಳ ಹಂಚಿಕೆ

ಬೆಂಗಳೂರು— ರಾಜ್ಯದಲ್ಲಿ ಇಲ್ಲಿವರೆಗೆ ಎರಡೂವರೆ ಲಕ್ಷ ನಿವೇಶನಗಳನ್ನು ಹಂಚಲಾಗಿದೆ ಎಂದು ಸೌಕಾಡಳಿತ ಮಂತ್ರಿ ಶ್ರೀ ಬಸವಡೆಂಗಪ್ಪನವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

○

ದೋಸೆ ಇಡ್ಲಿ

ಬಿದಯನಗರ— ಕಾಂಗ್ರೆಸ್ ಅಧಿವೇಶನದಲ್ಲಿ ದಕ್ಷಿಣ ಭಾರತದ ತಿಂಡಿ ಆದರಲ್ಲೂ ದೋಸೆ, ಇಡ್ಲಿ ಸಾಂಬಾರು ತುಂಬಾ ಜನಪ್ರಿಯವಾಗಿದೆ.

★

ರಿಟ್‌ಗೆ ರೂ. 100 ಕೂರ್ಟ್ ಫೀ !

ಬೆಂಗಳೂರು— ಸುಪ್ರೀಂ ಕೋರ್ಟಿನಲ್ಲಿ 32 ನೇ ನಿಬಂಧನೆಗೆ ಬದ್ಧ ರಿಟ್ ಅರ್ಜಿ ಹಾಕಲು ರೂ 50 ಕೂರ್ಟ್ ಫೀ ಇರುವಾಗ ಇಲ್ಲಿ ರೂ. 100 ಕ್ಕೆ ಹೆಚ್ಚಿಸುವ ಔಚಿತ್ಯ ಕರಿತು ಶ್ರೀ ಜಾಕ್ಸಾಲ್ ರು ವಿಧಾನ ಪರಿಷತ್ತಿನಲ್ಲಿ ಪ್ರಶ್ನಿಸಿದರು.

●

ಪ್ರತ್ಯೇಕ ಆಂಧ್ರ ರಾಜ್ಯ

ವಿಜಯವಾಡ— ಪ್ರತ್ಯೇಕ ಆಂಧ್ರ ರಾಜ್ಯ ಪಡೆಯಲು ಪರಿಣಾಮಕಾರಿ ಕಾರ್ಯ ಕ್ರಮವು ತಿರುಪತಿಯಲ್ಲಿ ತಾ॥ 31 ರಂದು ನಡೆಯುವ ಸಭೆಯಲ್ಲಿ ನಿರ್ಧರಿಸಲಾಗು ವುದೆಂದು ಉಪ ಮುಖ್ಯ ಮಂತ್ರಿ ಶ್ರೀ ಸುಬ್ಬಾರೆಡ್ಡಿ ಪತ್ರಿಕೆಯವರಿಗೆ ತಿಳಿಸಿದರು — ಸಭೆಯಲ್ಲಿ 12 ಆಂಧ್ರ ಜಿಲ್ಲೆಗಳ ಕಾಂಗ್ರೆಸ್ ಶಾಸಕರೂ, ಜಿಲ್ಲಾ ಪರಿಷತ್ ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷರೂ ಭಾಗವಹಿಸುವರು.

ಅಭಾವ ಸ್ಥಳಗಳ ತೊಂದರೆ ನಿವಾರಣೆಗೆ

ಬಿಡದನಗರ— 74 ನೇ ಕಾಂಗ್ರೆಸ್ ಅಧಿವೇಶನದ ಸೆಲೆಕ್ಟ್ ಕಮಿಟಿಯಲ್ಲಿ, ಕೇಂದ್ರ ಮತ್ತು ರಾಜ್ಯ ಸರಕಾರಗಳು ದೇಶದ ಹಲವು ಭಾಗಗಳಲ್ಲಿ ಅಭಾವ ಸ್ಥಿತಿ ಯಿಂದ ಜನರಿಗೊದಗಿರುವ ತೊಂದರೆ ನೀಗಲು ಆರ್ಥಿಕ ನೆರವಿನ ಉದಾರ ಸ್ಕೀಂಗಳ ನ್ನು ಕೈಗೊಳ್ಳಲು ಕರೆಕೊಡಲಾಯಿತು.

ಗಂಧದ ಚಕ್ಕೆ ವಶ

ಮೈಸೂರು— ಅರಣ್ಯ ಇಲಾಖೆಯ ಸಂಚಾರಿ ದಳದವರು ದೊಡ್ಡ ಒಕ್ಕಲು ಗೇರಿಯ ಲೇಥ್ ಮಿಷನ್ನಿನ ಆವರಣ ಒಂದರಲ್ಲಿ ಅಕ್ರಮವಾಗಿ ಶೇಖರಿಸಲ್ಪಟ್ಟಿದ್ದ ರೂ. 1200 ಬೆಲೆಬಾಳುವ ಗಂಧವನ್ನು ವಶಪಡಿಸಿಕೊಂಡಿದ್ದಾರೆ.

★

ದಿವ್ಯವಾಣಿ

ನಿನ್ನ ಮುಖಕ್ಕೆ ಯಾವ ಕನ್ನಡಿಯೂ ಬೇಡ : ಅನ್ಯ ಜನರಿಗೆ ನಿನ್ನ ಮುಖವೇ ಕನ್ನಡಿಯಾಗಿರಲಿ — ಜರಿಮಿ ಟೇಟರ್

SHAKTI
SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Edited Printed and Published by Dharmapracharanirata M S Krishna Rao (Proprietor) at the Satyavadi Press, Chamaraja puram, Mysore 4

ವುಡ್‌ಲಾಂಡ್ 29 12 72 ರಿಂದ ಅಮೋಘ 3ನೇ ವಾರ

ಸೆವೆನ್ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ — ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ ಸಂಗೀತ — ಲಕ್ಷ್ಮೀಕಾಂತ್ ಪ್ಯಾರೇಲಾಲ್

ಅಪೇರಾ 28 12 72 ರಿಂದ

ಜಯಂತಿ ಫಿಲಂಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ರಾಮನ್ ತೇಡಿಯ ಸೀತೈ

ಪಾತ್ರ — ಎಂ. ಜಿ ರಾಮಚಂದ್ರ್ ಜಯಲಲಿತ ತಾಯ್‌ನಾಗೇಶ್
ವಿ. ಕೆ. ರಾಮಸ್ವಾಮಿ

ಸಂಗೀತ — ಎಂ ಎಸ್. ವಿಶ್ವನಾಥ್ ನಿರ್ದೇಶನ — ಪಿ. ನೀಲಕಂಠ್

ದಿನ 3 ಪ್ರದರ್ಶನಗಳು

Protect the Cow



Help The Gorakshana

— Humanitarian Propoganda Monthly....

Quality Printing Neat Binding

Lakshminarasimha Press

Sivarampet, Mysore 1

Contribute Liberally to the National Defence Fund